**RPAD**

# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ದಂಡನೆ ವಿಧಿಸುವ ಬಗ್ಗೆ- ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/559/ಗ್ರಾಪಂಕಾ/2015, ದಿನಾಂಕ:10/11-12-2015.
2. ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: Uplok-2/DE-30/2016/ARE-3, ದಿನಾಂಕ:31-08-2018.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: Uplok-2/DE-30/2016/ARE-3, ದಿನಾಂಕ:03-09-2018.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: Uplok-2/DE-30/2016/ARE-3, ದಿನಾಂಕ:03-09-2018.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:559:ಗ್ರಾಪಂಕಾ:2015, ದಿನಾಂಕ:10/11-12-2015 ರಲ್ಲಿ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ"**

"ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ನಿಮ್ಮ ಕರ್ತವ್ಯ ಪಾಲನೆಯಲ್ಲಿ ದೂರುದಾರರು ಅಣ್ಣನ ಪತ್ನಿಯಾದ ಶ್ರೀಮತಿ ಫರಹತುನ್ನೀಸ್ ಕೋಂ ಶ್ರೀ ಅಮೀರ್‌ಜಾನ್ ಸಾಬ್ ಮತ್ತು ಅವರ ಮಗಳಾದ ಶ್ರೀಮತಿ ಜಮೀರಾ ಖಾನಂ ಬಿನ್ ಶ್ರೀ ಅಮೀರ್‌ಜಾನ್ ಸಾಬ್ ರವರು ದೂರುದಾರರನ್ನು ಹೊರತುಪಡಿಸಿ ಶ್ರೀ ಅಮೀರ್‌ಜಾನ್ ಸಾಬ್ ರವರ ಬೇರೆ ಇಬ್ಬರು ಹೆಣ್ಣುಮಕ್ಕಳು ಮತ್ತು ಮಗನ ವಿರುದ್ಧ ಸಲ್ಲಿಸಿದ ದಾವೆ ನಂ.53/2007 ರಲ್ಲಿ ಫ್ರಿಲಿಮಿನರಿ ಡಿಕ್ರಿಯನ್ನು ಪಡೆದಿದ್ದು, ಸದರಿ ಫ್ರಿಲಿಮಿನರಿ ಡಿಕ್ರಿಯ ಮೇಲೆ ಫೈನಲ್ ಡಿಕ್ರಿಯನ್ನು ದೂರುದಾರರನ್ನು ಹೊರತುಪಡಿಸಿ ನ್ಯಾಯಾಲಯದಿಂದ ಪಡೆದುಕೊಂಡಿದ್ದು, ಅಮಲ್ ಜಾರಿ ಪ್ರಕರಣವನ್ನು ದಾಖಲಿಸಿದ್ದು, ಸದರಿ ಅಮಲ್ ಜಾರಿ ಪ್ರಕರಣದಲ್ಲಿಯೂ ದೂರುದಾರರನ್ನು ಪಕ್ಷಗರರನ್ನಾಗಿ ಮಾಡದೇ ಇದ್ದರೂ ಸಹ ದೂರುದಾರರ ಹೆಸರಿನಲ್ಲಿದ್ದ ಕೂಡ್ಲಗೆರೆ ಗ್ರಾಮದ ಆಸ್ತಿ ನಂ.222 ರ ಖಾತೆಯನ್ನು ದೂರುದಾರರಿಗೆ ನೋಟೀಸನ್ನು ಕೊಡದೇ ಮತ್ತು ದೂರುದಾರರ ತಕರಾರನ್ನು ಪಡೆದುಕೊಳ್ಳದೇ ಸದರಿ ನ್ಯಾಯಾಲಯದ ಆದೇಶವು ದೂರುದಾರರನ್ನು ಬಾಧಿಸುವುದಿಲ್ಲ ಎಂಬುದು ಗೊತ್ತಿದ್ದೂ ಸಹ ಸದರಿ ಖಾತೆಯನ್ನು ಶ್ರೀಮತಿ ಫರಹುತುನ್ನೀಸ್ ಮತ್ತು ಅವರ ಮಗಳಾದ ಶ್ರೀಮತಿ ಜಮೀರಾ ಖಾನಂ ಅವರ ಹೆಸರಿನಲ್ಲಿ ದಾಖಲು ಮಾಡಿದ್ದ ಕಾರಣ ಜವಾಬ್ದಾರಿಯುತ ಸರ್ಕಾರಿ ನೌಕರರಾಗಿದ್ದರೂ ಸಹಿತ ನಿಯಮಾವಳಿಗಳನ್ನು ಉಲ್ಲಂಘಿಸಿ ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1) (i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) 1957ರ ಮೇರೆಗೆ ನಿಮ್ಮ ಮೇಲೆ ದೋಷರೋಪಣೆಯನ್ನು ಮಾಡಲಾಗಿದೆ".

2..

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಆಪಾದಿತ ನೌಕರರಾದ ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ಪ್ರಕರಣದಲ್ಲಿ ಇವರ ವಿರುದ್ಧದ ಆರೋಪಗಳು ಸಾಬೀತಾಗದಿರದ ಕಾರಣ ವಿಚಾರಣಾ ಪ್ರಕ್ರಿಯೆಯನ್ನು ಕೈಬಿಟ್ಟಿರುತ್ತಾರೆ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತಿಳಿಸಿರುವುದಾಗಿ ಅಪರ ನಿಬಂಧಕರು, ವಿಚಾರಣೆಗಳು-3 ರವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿರುವ ಪತ್ರದಲ್ಲಿ ತಿಳಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಅಪರ ನಿಬಂಧಕರು, ವಿಚಾರಣೆಗಳು-3 ರವರು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿ ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಆರೋಪಗಳು ಸಾಬೀತಾಗದಿರದ ಕಾರಣ ಸದರಿಯವರನ್ನು ಆರೋಪದಿಂದ ಮುಕ್ತಗೊಳಿಸಿರುತ್ತಾರೆ ಎಂದು ತಿಳಿಸಿರುವುದರಿಂದ ಸರ್ಕಾರವು ಆಪಾದಿತ ನೌಕರರ ವಿರುದ್ಧ ವಿಚಾರಣೆಯನ್ನು ಕೈಬಿಡಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 559 ಗ್ರಾಪಂಕಾ 2015, ಬೆಂಗಳೂರು, ದಿನಾಂಕ:28-11-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಆರೋಪಗಳು ಸಾಬೀತಾಗದಿರದ ಕಾರಣ ಸದರಿಯವರನ್ನು ಆರೋಪದಿಂದ ಮುಕ್ತಗೊಳಿಸಿರುತ್ತಾರೆ ಎಂದು ತಿಳಿಸಿರುವುದರಿಂದ ಸರ್ಕಾರವು ಸದರಿ ಆಪಾದಿತ ನೌಕರರ ವಿರುದ್ಧ ವಿಚಾರಣೆಯನ್ನು ಕೈಬಿಟ್ಟು ದೋಷಮುಕ್ತರನ್ನಾಗಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

28/11

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭದ್ರಾವತಿ, ಶಿವಮೊಗ್ಗ ಜಿಲ್ಲೆ.
7. ಶ್ರೀ ಟಿ.ಹೆಚ್. ಸಂತೋಷ್, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕೂಡ್ಲಿಗೆರೆ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.